# ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಸಂ: ಮನಪಾಬ/ಆ.ಶಾ/ಘ.ತ್ಯಾ.ವ.ನಿ/ಸಾ.ಪ್ರ/2007-08 ದಿನಾಂಕ : 07.04.2007

## ಸಾರ್ವಜನಿಕ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ ಸಮಸ್ತ ಸಾರ್ವಜನಿಕಬಾಂಧವರಿಗೆ ಈ ಮೂಲಕ ತಿಳಿಯಪಡಿಸುದವುದೇನೆಂದರೆ ಘನ ಸರ್ಕಾರದ ಆದೇಶದ ಮೇರೆಗೆ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ವಿಲೇವಾರಿ ಕಾರ್ಯಗಳ ನಿರ್ವಹಣೆಗಾಗಿ ಮತ್ತು ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಡೆಗಟ್ಟಲು ಪ್ರಾಥಮಿಕ ಕಸ ಸಂಗ್ರಹಣಾ ಕಾರ್ಯದಲ್ಲಿ ನಗರ ಸ್ತ್ರೀ ಶಕ್ತಿ ಮತ್ತು ಸ್ವ-ಸಹಾಯ ಗುಂಪುಗಳನ್ನು ತೊಡಗಿಸಲಾಗಿದೆ.

### I .ಸಾರ್ವಜನಿಕರ ಜವಾಬ್ದಾರಿಗಳು

1. ಕಸವನ್ನು ಕಡ್ಡಾಯವಾಗಿ ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಗೆ ನೀಡತಕ್ಕದ್ದು. ಕಸವನ್ನು ಚರಂಡಿ, ರಸ್ತೆಗಳ ಮೇಲೆ ಹಾಕಬಾರದು. ಹಾಕುವವರ ವಿರುದ್ಧ ಕ್ರಮ ಜರುಗಿಸಲಾಗುವುದು.
2. ಕಸವನ್ನು ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಗೆ ಮಹಾನಗರ ಪಾಲಿಕೆಯು ನಿಗಧಿ ಪಡಿಸಿದ ಸೇವಾ ಶುಲ್ಕಗಳನ್ನು ಕಡ್ಡಾಯವಾಗಿ ಎಲ್ಲಾ ಸಾರ್ವಜನಿಕರು ತಪ್ಪದೇ ಪ್ರತಿ ತಿಂಗಳು ಪಾವತಿಸಬೇಕು. ಪಾವತಿ ಮಾಡದೇ ಇದ್ದ ನಾಗರೀಕರಿಗೆ ಸೂಕ್ತವಾದ ದಂಡವನ್ನು ಗರಿಷ್ಟ ರೂ. 200/- ವರೆಗೆ ದಂಡವನ್ನು ವಿಧಿಸಲಾಗುವುದು ಹಾಗೂ ಮಹಾನಗರಪಾಲಿಕೆವತಿಯಿಂದ ದೊರೆಯುವ ಸೌಲಭ್ಯಗಳಾದ ನೈರ್ಮಲೀಕರಣ, ನೀರು ಸರಬರಾಜು, ಜನನ-ಮರಣ ಪ್ರಮಾಣಪತ್ರ, ಕಟ್ಟಡ ಪರವಾನಿಗೆ, ಖಾತಾ ಬದಲಾವಣೆ ಮುಂತಾದ ಸೌಲಭ್ಯಗಳನ್ನು ನೀಡುವುದಿಲ್ಲ.
3. ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಗೆ ಕಸವನ್ನು ನೀಡದೇ ಇದ್ದರೂ ಸಹಾ ಸಾರ್ವಜನಿಕರು ನಗರಸ್ತ್ರೀಶಕ್ತಿ ಗುಂಪುಗಳಿಗೆ ಕಡ್ಡಾಯವಾಗಿ ಸೇವಾ ಶುಲ್ಕಗಳನ್ನು ಪಾವತಿಸತಕ್ಕದ್ದು.
4. ಸೇವಾ ಶುಲ್ಕವನ್ನು ಪ್ರತಿ ತಿಂಗಳು 10ನೇ ತಾರೀಖು ಒಳಗಾಗಿ ಆಯಾ ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಗೆ ಪಾವತಿಸತಕ್ಕದ್ದು.
5. ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳ ಸದಸ್ಯರೊಂದಿಗೆ/ಕಸ ಸಂಗ್ರಹಗಾರರ ಜೊತೆ ಸೌಜನ್ಯದಿಂದ ವರ್ತಿಸಿ ಕಸ ಸಂಗ್ರಹಣೆಯಲ್ಲಿ ಸಹಕಾರ ನೀಡುವುದು.
6. ನಗರ ನೈರ್ಮಲೀಕರಣಕ್ಕೆ ಸಾರ್ವಜನಿಕರ ಸಹಕಾರ ಅತಿಮಹತ್ವದ್ದು, ಆದ್ದರಿಂದ ಪ್ರತಿಯೊಬ್ಬ ಸಾರ್ವಜನಿಕರು ನಗರಪಾಲಿಕೆಯೊಂದಿಗೆ ಸಹಕರಿಸುವುದು.

### II .ನಗರ ಸ್ತ್ರೀ ಶಕ್ತಿ/ ಸ್ವ-ಸಹಾಯ ಗುಂಪುಗಳ ಜವಾಬ್ದಾರಿಗಳು

1. ಪ್ರತಿ ದಿನ ಬೆಳಿಗ್ಗೆ 6.30 ರಿಂದ 10.30 ಘಂಟೆಗೆ ವರೆಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮನೆಗಳಿಗೆ ಭೇಟಿ ನೀಡಿ ಕಸ ಸಂಗ್ರಹಿಸುವುದು.
2. ನಾಗರೀಕರ ಜೊತೆ ಸೌಜನ್ಯದಿಂದ ವರ್ತಿಸುವುದು.
3. ಸಂಗ್ರಹಿಸಿದ ಕಸವನ್ನು 2ನೇ ಹಂತದ ಕಸ ಸಂಗ್ರಹಣಾ ಸ್ಥಳದಲ್ಲಿ ಇಡಲಾದ ಕಂಟೇನರ್‌ಗಳಲ್ಲಿ ಕಸವನ್ನು ಸರಿಯಾಗಿ ಹಾಕತಕ್ಕದ್ದು.
4. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಯಾ ನಗರಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳು ತಮ್ಮ ದೂರವಾಣಿ ಸಂಖ್ಯೆಗಳನ್ನು ಸಾರ್ವಜನಿಕರಿಗೆ ಒದಗಿಸತಕ್ಕದ್ದು.

# ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

**III .ಸಾಮಾನ್ಯ ಮಾಹಿತಿ**

1. **ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ/ ಕಸಸಂಗ್ರಹಗಾರರಿಗೆ ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಸಂಬಳ ನೀಡಲಾಗುತ್ತಿಲ್ಲ. ನಾಗರೀಕರಿಂದ ಸಂಗ್ರಹಿಸಿದ ಸೇವಾ ಶುಲ್ಕಗಳ ಮೊತ್ತದಲ್ಲಿಯೇ ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳು ಪ್ರಾಥಮಿಕ ಕಸ ಸಂಗ್ರಹಣಕ್ಕಾಗಿ ಬೇಕಾದ ವಾಹನಗಳು, ಸಿಬ್ಬಂದಿ ವೇತನ ನಿರ್ವಹಣೆ ಇತ್ಯಾದಿಗಳನ್ನು ನಿರ್ವಹಿಸಿಕೊಳ್ಳುತ್ತಿದ್ದಾರೆ.**
2. ಸೇವಾ ಶುಲ್ಕಗಳು ಪ್ರತಿ ತಿಂಗಳಿಗೆ ವಾಸದ ಕಟ್ಟಡಗಳಿಗೆ ರೂ. 20/-, ವಾಣಿಜ್ಯ ಕಟ್ಟಡಗಳಿಗೆ ರೂ. 30/- (1000 ಚ.ಅ ಕ್ಕಿಂತ ಕಡಿಮೆ ಪ್ರದೇಶ ಕಟ್ಟಡಗಳಿಗೆ) ಮತ್ತು ರೂ. 75/- (1000 ಚ.ಅ ಕ್ಕಿಂತ ಹೆಚ್ಚು ಪ್ರದೇಶದ ಕಟ್ಟಡಗಳಿಗೆ), ಕಾರ್ಖಾನೆಗಳಿಗೆ ರೂ.250/- (1000 ಚ.ಅ.ಕ್ಕಿಂತ ಕಡಿಮೆ ಪ್ರದೇಶಗಳಿಗೆ) ಮತ್ತು ರೂ.500/- (1000 ಚ.ಅ ಕ್ಕಿಂತ ಹೆಚ್ಚು ಪ್ರದೇಶಗಳ ಕಟ್ಟಡಗಳಿಗೆ), ಹೋಟೆಲ್‌ಗಳಿಗೆ ರೂ. 100/- ಮುಂತಾದ ಸೇವಾ ಶುಲ್ಕಗಳನ್ನು ಆಯಾ ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಗೆ ಕಡ್ಡಾಯವಾಗಿ ಪಾವತಿಸತಕ್ಕದ್ದು. ಮಹಾನಗರ ಪಾಲಿಕೆವತಿಂದ ನಿಗಧಿಪಡಿಸಿದ ಸೇವಾ ಶುಲ್ಕ ವಿವರಗಳ ಕರ-ಪತ್ರವನ್ನು ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳಿಂದ ಪಡೆಯತಕ್ಕದ್ದು.
3. ನಗರ ಸ್ತ್ರೀಶಕ್ತಿ/ಸ್ವ-ಸಹಾಯ ಗುಂಪುಗಳ ವಿರುದ್ಧ ಯಾವುದೇ ದೂರುಗಳು ಇದ್ದಲ್ಲಿ ನಿಮ್ಮ ದೂರುಗಳನ್ನು ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ ಇವರಿಗೆ ನೀಡತಕ್ಕದ್ದು.

ಈ ನಿಟ್ಟಿನಲ್ಲಿ ನಗರ ಪಾಲಿಕೆ ತಮ್ಮ ಅಮೂಲ್ಯ ಸಹಕಾರ ನಿರೀಕ್ಷಿಸಿದೆ.

**ಆಯುಕ್ತರು**
**ಬಳ್ಳಾರಿ ಮಹಾನಗರ ಪಾಲಿಕೆ,**
**ಬಳ್ಳಾರಿ**